

ಪ್ರಮಾಣದಲ್ಲಿ ಆಗುತ್ತದೆ. ಇಂತಹ ಸಂದರ್ಭಗಳಲ್ಲಿ ಮೃತರ ಸಂಬಂಧಿಕರು ಬಹಳಷ್ಟು ಆಕ್ಷೇಪಿಸುತ್ತಾರೆ. ಸ್ವಲ್ಪ ಸಮಯದ ಮುಂಚೆ ದೂರವಾಣಿಯಲ್ಲಿ ಮಾತನಾಡಿದರು, ಹಠಾತ್ತನೆ ಹೇಗೆ ಸಾವನ್ನಪ್ಪಿದರು ಎಂದು ಪ್ರಶ್ನಿಸುತ್ತ, 'ಸರಿಯಾಗಿ ಚಿಕಿತ್ಸೆ ಮಾಡಿಲ್ಲ, ನೀವೇ ಅವರನ್ನು ಕೊಂದಿರಿ' ಎಂದು ನೇರವಾಗಿ ದೂಷಿಸುತ್ತಾರೆ. ನಮ್ಮ ಸ್ಪಷ್ಟೀಕರಣವನ್ನು ಸ್ವೀಕರಿಸಲು ತಯಾರಿರುವುದಿಲ್ಲ ಹಾಗೂ ಅವರಿಗೆ ಪ್ರತಿಯೊಂದನ್ನು ವಿವರಿಸುವಷ್ಟು ಸಮಯವೂ ನಮ್ಮಲ್ಲಿ ಇರುವುದಿಲ್ಲ. ಅಷ್ಟು ಸಮಯದಲ್ಲಿ ಇನ್ನೊಂದಿಬ್ಬರು ರೋಗಿಗಳ ಜೀವವನ್ನು ಉಳಿಸಬಹುದಾಗಿರುತ್ತದೆ.

ಕೋವಿಡ್ ಕಾಯಿಲೆ, ಅದರ ರೋಗಲಕ್ಷಣ, ಹೊಸ ಪರಿವರ್ತಿತ ವೈರಾಣು, ಎಲ್ಲವೂ ಒಂದು ಕಗ್ಗಂಟು. ಸಮಯ ಕಳೆದಂತೆ ಈ ರೋಗದ ಬಗ್ಗೆ ಹಾಗೂ ಅದರ ಚಿಕಿತ್ಸೆಯ ಬಗ್ಗೆ ಹೊಸ ಹೊಸ ವಿಚಾರಗಳು ಬೆಳಕಿಗೆ ಬರುತ್ತಿವೆ. ಹಾಗಾಗಿ ರೋಗಿಯ ಆರೋಗ್ಯ ಸ್ಥಿತಿಯಲ್ಲಿನ ತೀವ್ರ ಬದಲಾವಣೆಗಳನ್ನು ವಿವರಿಸುವುದು ಈಗಿನ ಪರಿಸ್ಥಿತಿಯಲ್ಲಿ ಕಷ್ಟಸಾಧ್ಯವೇ ಸರಿ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.

ಎಲ್ಲ ವೈದ್ಯ ಸಿಬ್ಬಂದಿಯು ಒಳ್ಳೆಯವರೆಂದು ನಾನು ಹೇಳುವುದಿಲ್ಲ. ಕೆಲವು ನೀಚ ಬುದ್ಧಿಯವರು ಪರಿಸ್ಥಿತಿಯನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಅಂತಹವರಿಗೆ ನನ್ನ ಧಿಕ್ಕಾರ ಹಾಗೂ ಅವರಿಗೆ ಕಠಿಣ ಶಿಕ್ಷೆಯಾಗಬೇಕು. ಆದರೆ ಕೆಲವು ಹುಳುಕು ಬುದ್ಧಿಯವರು ಮಾಡುವ ಕೆಟ್ಟ ಕೆಲಸಕ್ಕೆ, ಪೂರ್ತಿ ವೈದ್ಯ ಬಳಗವನ್ನು ದೂಷಿಸುವುದು ಸರಿಯಲ್ಲ. ಅದು, ತಮ್ಮ ಜೊತೆಗೆ ತಮ್ಮ ಮನೆಯವರ ಜೀವವನ್ನು ಅಪಾಯದಲ್ಲಿಟ್ಟು ರೋಗಿಗಳ ಆರೈಕೆಯಲ್ಲಿ ತೊಡಗಿರುವವರ ಮನಸ್ಥಿತಿಗೆ ಬಹಳಷ್ಟು ನೋವನ್ನುಂಟುಮಾಡುತ್ತದೆ. ಹೆತ್ತ ತಾಯಿಯೇ ಮಗುವನ್ನು ಕೊಂದಿರುವ ಘಟನೆಗಳನ್ನು ಕೇಳಿಲ್ಲವೇ? ತಂದೆಯೇ ಮಗಳ ಮೇಲೆ ಅತ್ಯಾಚಾರ ಎಸಗಿರುವ ಸುದ್ದಿಗಳನ್ನು ನೋಡಿಲ್ಲವೇ? ಇದರಿಂದ ಎಲ್ಲ ತಾಯಂದಿರು ಕಟುಕರು, ತಂದೆಯರು ನೀಚರು ಎಂದು ಹೇಳಲು ಆಗುತ್ತದೆಯೇ? ಕೆಲವೊಬ್ಬರು ಅಂತಹ ಹೇಯ ಕೃತ್ಯಗಳನ್ನು ಎಸಗಿದಾಕ್ಷಣ ಎಲ್ಲರೂ ಹಾಗೆಯೇ ಎಂದು ಯಾರೂ ಹೇಳುವುದಿಲ್ಲ. ಎಲ್ಲವನ್ನೂ ಸಾಮಾನ್ಯೀಕರಣಗೊಳಿಸುವುದು ಸಮಂಜಸವಲ್ಲ.

ಕಳೆದ ವಾರ ಆಸ್ಪತ್ರೆಯ ಮುಖ್ಯದ್ವಾರದಲ್ಲಿ ತಮ್ಮ ಪಾಳಿಯ ಕೆಲಸವನ್ನು ಮುಗಿಸಿ ಬರುತ್ತಿದ್ದ ಸಿಸ್ಟರ್ ಒಬ್ಬರು ಎದುರಾದರು. ಪರಿಚಯದವರಾಗಿದ್ದರಿಂದ ಮಾತನಾಡಿಸಿದೆ. ಆಕೆಯ ಪತಿ ಕೋವಿಡ್ ಸೋಂಕಿತರಾಗಿ ನಮ್ಮ ಆಸ್ಪತ್ರೆಯಲ್ಲಿಯೇ ದಾಖಲಾಗಿರುವ ವಿಷಯ ತಿಳಿಯಿತು. ತನ್ನ ಪರೀಕ್ಷೆಯಲ್ಲಿ ನೆಗೆಟಿವ್ ವರದಿ ಬಂದ ತಕ್ಷಣವೇ ಆಕೆ ಕೆಲಸಕ್ಕೆ ಹಾಜರಾಗಿದ್ದಾರೆ. ಪಕ್ಕದ ವಾರ್ಡ್‌ನಲ್ಲಿ ತನ್ನ ಪತಿ ದಾಖಲಾಗಿದ್ದರೂ, ಅನ್ಯ ರೋಗಿಗಳ ಸೇವೆಯಲ್ಲಿ ನಿರತರಾಗಿದ್ದಾರೆ. ಬೇರೆಯವರಾಗಿದ್ದರೆ ಆಕಾಶವೇ ತಲೆಮೇಲೆ ಬಿದ್ದಂತೆ ಕುಸಿದುಹೋಗುತ್ತಿದ್ದರು. ಆದರೆ ಈ ದಿಟ್ಟ ಮಹಿಳೆ ಅಂತಹ ಕಷ್ಟದ ಕಾಲದಲ್ಲಿಯೂ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಇಂಥ ಸಾವಿರಾರು ನಿಸ್ವಾರ್ಥ ಸೇವಕರು ನಮ್ಮ ನಡುವೆಯಿದ್ದಾರೆ.

ಪ್ರತಿಯೊಬ್ಬ ಆರೋಗ್ಯ ಸಿಬ್ಬಂದಿಯು ತನ್ನ ನೋವುಗಳಲ್ಲಿಯೂ ಸಮಾಜದ ಒಳಿತಿಗಾಗಿ ಶ್ರಮಿಸುತ್ತಿದ್ದಾನೆ. ಆದರೆ ಕೆಲವು ಕಡೆ ನಡೆಯುವ ದುಷ್ಕೃತ್ಯಗಳನ್ನು ಚಿತ್ರಿಸಿ, ಎಲ್ಲರೂ ಹಾಗೆಯೇ ಎಂದು ಹಣೆಪಟ್ಟಿ ಕಟ್ಟಿದಾಗ ಅಷ್ಟೊಂದು ನೋವಿನಲ್ಲಿ ಶ್ರಮಿಸುತ್ತಿರುವವರ ಮನೋಸ್ಥಿತಿ ಏನಾಗಬಹುದು ಯೋಚಿಸಿ. ಯಾವುದೋ ಆಸ್ಪತ್ರೆಯಲ್ಲಿ ಏನೋ ಮೋಸ ನಡೆಯುತ್ತಿದೆ ಎಂದರೆ ಅದನ್ನು ವೈದ್ಯರೇ ಮಾಡುತ್ತಿದ್ದಾರೆ ಎಂದರ್ಥವಲ್ಲ. ವೈದ್ಯ ಆಸ್ಪತ್ರೆಯ ಒಂದು ಭಾಗ ಅಷ್ಟೇ, ತಿಂಗಳ ಸಂಬಳಕ್ಕೆ ದುಡಿಯುವ ನೌಕರ. ಎಷ್ಟೋ ಬಾರಿ ಅವನ ಗಮನಕ್ಕೆ ಬಾರದೆ ಆಸ್ಪತ್ರೆಯ ಆಡಳಿತ ಮಂಡಳಿಗಳಿಂದ ಬಡ ರೋಗಿಗಳ ಮೇಲೆ ದೌರ್ಜನ್ಯ ನಡೆಯುತ್ತಿರುತ್ತದೆ.

ಸತ್ಯಾಸತ್ಯತೆ ಅರಿಯುವ ಮುನ್ನ ಬಾಯಿಗೆ ಬಂದಂತೆ ಮಾತನಾಡಿ ವಿಡಿಯೋಗಳನ್ನು ಹರಿಯಬಿಡುವುದು, ಸುದ್ದಿ ವಾಹಿನಿಗಳು ತಳಬುಡವಿಲ್ಲದ ವಿಷಯಗಳನ್ನು ತೋರಿಸುವುದು ನಿಲ್ಲಿಸಬೇಕು. ಆದಾಗ್ಯೂ ನಿಮಗೆ ಎಲ್ಲಾದರೂ ಮೋಸ, ಅನ್ಯಾಯ ನಡೆಯುತ್ತಿದೆ ಎನಿಸಿದರೆ ಆಧಾರ ಸಮೇತ ಪೊಲೀಸರಿಗೆ ದೂರು ನೀಡಿ. ಅದರಿಂದ ಸೂಕ್ತ ಕ್ರಮ ಜರುಗಿದಾಗ ಬೇರೆಯವರಿಗೆ ಮೋಸವಾಗುವುದು ತಪ್ಪುತ್ತದೆ. ಅದನ್ನು ಬಿಟ್ಟು ಏನೇನೋ ಬಡಬಡಿಸಿ, ಇಡೀ ವೈದ್ಯ ಕುಲವನ್ನೇ ದೂಷಿಸಿದರೆ, ಕಷ್ಟಪಟ್ಟು ಜೀವ ಒತ್ತೆಯಿಟ್ಟು ದುಡಿಯುತ್ತಿರುವವರು ಕೂಡ ಮಾನಸಿಕ ಸ್ಥೈರ್ಯವನ್ನು ಕಳೆದುಕೊಳ್ಳುತ್ತಾರೆ ಹಾಗೂ ಇದರಿಂದ ಅನವಶ್ಯಕ ಭಯ ಮೂಡಿ ರೋಗಿ ಚಿಕಿತ್ಸೆಯಿಂದ ದೂರ ಉಳಿದು, ಸಮಯ ಮೀರಿದ ಮೇಲೆ ಆಸ್ಪತ್ರೆಗೆ ಬರುತ್ತಾನೆ. ಆಗ ಎಲ್ಲವೂ ಕೈ ಮೀರಿ ಹೋಗಿರುತ್ತದೆ.

ಆರೋಪ ಪ್ರತ್ಯಾರೋಪಗಳನ್ನು ಮಾಡುವ ಸಮಯ ಇದಲ್ಲ. ನಮ್ಮನ್ನಗಲಿದವರ ಆತ್ಮಕ್ಕೆ ಶಾಂತಿ ಕೋರುತ್ತಾ, ಇರುವವರನ್ನು ಉಳಿಸಿಕೊಳ್ಳುವ ಕಡೆ ಗಮನ ಹರಿಸಬೇಕಿದೆ. ಎಲ್ಲರಿಗೂ ಇದು ಕಷ್ಟದ ಸಮಯ, ಪರಸ್ಪರ ನಂಬಿಕೆ ವಿಶ್ವಾಸಗಳಿಂದ ಮಾತ್ರ ಕೊರೊನಾ ಅಂಧಕಾರದಿಂದ ಹೊರಬರಲು ಸಾಧ್ಯ.

ಪ್ರತಿಕ್ರಿಯಿಸಿ: **feedback@sudha.co.in**